(ಆ) ಮತ್ತು (ಇ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು ಎಸ್‌ಡಿಎಫ್‌ನಿಂದ ರೂ.228.17 ಲಕ್ಷ ಸಾಲ ಪಡೆದಿರುತ್ತದೆ. ಸದರಿ ಸಾಲಕ್ಕೆ ಶೇ 9 ರಷ್ಟು ಬಡ್ಡಿ ಹಾಗೂ ಸುಸ್ತಿಯಾದರೆ ಶೇ 2.5 ರಂತೆ ಸುಸ್ತಿ ಬಡ್ಡಿ ವಿಧಿಸಲಾಗುತ್ತಿದೆ ಅದೇ ರೀತಿ ಎನ್‌ಸಿಡಿಸಿಯು ರಾಜ್ಯ ಸರ್ಕಾರದ ಮುಖಾಂತರ ರೂ.125.00 ಲಕ್ಷ ಬಿಡುಗಡೆ ಮಾಡಿದ್ದು, ಶೇ 15.5ರಷ್ಟು ಬಡ್ಡಿ ವಿಧಿಸುತ್ತಿದೆ.

ಈ) ಎಸ್‌ಡಿಎಫ್‌ನಿಂದ ಪಡೆದ ಸಾಲದ ಬಾಬ್ತು ರೂ.164.38 ಲಕ್ಷಗಳನ್ನು ಈಗಾಗಲೇ ಮರುಪಾವತಿ ಮಾಡಿದ್ದು, ಬಾಕಿಯಿರುವ ಸಾಲ ರೂ.63.79 ಲಕ್ಷಗಳನ್ನು ನಿಗದಿಪಡಿಸಿರುವ ಕಂತುಗಳ ಪ್ರಕಾರ ಪಾವತಿಸಲು ಕ್ರಮ ಕೈಗೊಳ್ಳಾಗುವುದು. ರಾಜ್ಯ ಸರ್ಕಾರದ ಮೂಲಕ ಪಡೆದಿರುವ ಎನ್‌ಸಿಡಿಸಿ ಸಾಲ ಮರುಪಾವತಿಯನ್ನು ಪ್ರಾರಂಭಿಸಿರುವುದಿಲ್ಲ. ಮೇಲ್ಕಂಡ ಸಾಲಗಳಿಗೆ ಸರ್ಕಾರವು ಗ್ಯಾರಂಟಿ ನೀಡದಿರುವುದರಿಂದ ಗ್ಯಾರಂಟಿ ಪತ್ರದ ದೃಢೀಕೃತ ಪ್ರತಿ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿರುವ ಬಗ್ಗೆ**

4260 (4940) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ ಆಡಳಿತ ವರ್ಗದವರು ಕಾರ್ಮಿಕರಲ್ಲಿ ಇಬ್ಬಗೆಯ ನೀತಿ ಅನುಸರಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಕಾರ್ಖಾನೆಯಲ್ಲಿ ಆಡಳಿತ ವರ್ಗದವರು ಕಾರ್ಮಿಕರಲ್ಲಿ ಇಬ್ಬಗೆಯು ನೀತಿ ಅನುಸರಿಸುತ್ತಿರುವುದಿಲ್ಲ

ಉದ್ಭವಿಸುವುದಿಲ್ಲ.

**ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆಯ ಅವ್ಯವಹಾರಗಳನ್ನು ತಡೆಗಟ್ಟುವ ಬಗ್ಗೆ**

4261 (4942) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತ ವಿರೋಧಿ ನೀತಿ, ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿರುವ ಮತ್ತು ಸರ್ಕಾರದ ಹಣಕ್ಕೆ ವಂಚನೆ ಮಾಡಲು ಹೊರಟಿರುವ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿ ಸದರಿ ಕಾರ್ಖಾನೆಯ ಷೇರುದಾರರೊಬ್ಬರು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ 2001ರಲ್ಲಿ ಮನವಿ ಸಲ್ಲಿಸಿರುವುದು ನಿಜವೇ:

ಆ) ಹೌದಾದಲ್ಲಿ, ಈ ಬಗ್ಗೆ ಸದರಿ ಜಿಲ್ಲಾಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿ ಸದರಿ ಕಾರ್ಖಾನೆಯ ಷೇರುದಾರರೊಬ್ಬರು 2001ರಲ್ಲಿ ಮನವಿ ಸಲ್ಲಿಸಿರುವ ಬಗ್ಗೆ ಕಂಡು ಬಂದಿರುವುದಿಲ್ಲವೆಂಬ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

2) ಪ್ರಶ್ನೆ ಉದ್ಭವಿಸುವುದಿಲ್ಲ.